# ಕಲಿಯುಗದೊಳು ಹರಿನಾಮವ ನೆನೆದರೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** The wordings are as per Ref. 1 above. This song is not available in other standard books that I normally refer.
3. **Note:** The wordings are as per Ref. 1. The wordings of the singer fully matches with these lyrics.
4. **Note:** There are two parts of pravachanas. Only Part-1 is uploaded here in this website. Those who are interested can see Part-2 through this link: https://www.youtube.com/watch?v=BjoXubiVQJ4&list=PLiXde4bHfHX_cVjLZrq86xyWOt77VfJJP&index=25

ರಾಗ ಬೇಹಾಗ್ ಆದಿ ತಾಳ

ಕಲಿಯುಗದೊಳು ಹರಿನಾಮವ ನೆನೆದರೆ
ಕುಲ ಕೋಟಿಗಳುದ್ಧರಿಸುವುವು || ಪ ||

ಸುಲಭದ ಮುಕುತಿಗೆ ಸುಲಭನೆಂದೆನಿಸುವ
ಜಲರುಹನಾಭನ ನೆನೆ ಮನವೆ || ಅಪ ||

ಸ್ನಾನವನರಿಯೆನು ಮೌನವನರಿಯೆನು
ಧ್ಯಾನವನರಿಯೆನೆಂದೆನಬೇಡ
ಜಾನಕಿ ವಲ್ಲಭ ದಶರಥ ನಂದನ
ಗಾನ ವಿನೋದನ ನೆನೆ ಮನವೆ || 1 ||

ಅರ್ಚಿಸಲರಿಯೆನು ಮೆಚ್ಚಿಸಲರಿಯೆನು
ತುಚ್ಛನು ನಾನೆಂದೆನಬೇಡ
ಅಚ್ಯುತಾನಂತ ಗೋವಿಂದ ಮುಕುಂದನ
ಇಚ್ಛೆಯಿಂದ ನೀ ನೆನೆ ಮನವೆ || 2 ||

ಜಪವೊಂದರಿಯೆನು ತಪವೊಂದರಿಯೆನು
ಉಪದೇಶವಿಲ್ಲೆಂದೆನಬೇಡ
ಅಪಾರ ಮಹಿಮ ಶ್ರೀ ಪುರಂದರ ವಿಠಲನ
ಉಪಾಯದಿಂದಲಿ ನೆನೆ ಮನವೆ || 3 ||

**Classification:** keerthane
**Ankita:** sri purandara vittala
**Location:** NA
**Category:** nama mahime, jeevanoddhara
**Group Words:** kaliyuga, Krishna, mukti, snana, mouna, sita, rama, Dasharatha, archane, achyuta, Ananta, Vishnu, japa, upadesha,
**Pravachana:** Vid. Kallapur Pavamanachar
**Explanation:** NA